ಮುಂಜಾನೆ ಈ ವಚನ ಓದಿ ಚಿಂತೆಗೆ ಒಳಗಾಗಿದ್ದ ಚಂದ್ರಕಾಂತಯ್ಯ. ತನ್ನ ಸ್ವಭಾವವನ್ನು ಹೆಂಡತಿ ವಿರೋಧಿಸಿದ್ದನ್ನು ನಿರಾಕರಿಸದೆ ತಾಳ್ಮೆಯಿಂದ ಯೋಚಿಸತೊಡಗಿದ್ದ. ಕಲ್ಯಾಣದ ಬಸವಣ್ಣ ಈ ನಿಲುವಿಗೆ ಹೆಂಗ ಬಂದ? ಸಾಧ್ಯವಿಲ್ಲ. ಇದು ಮುಂದೆ ವಚನ ಸಂಗ್ರಹಿಸುವವರು ತಮ್ಮ ಹಿತಕ್ಕೆ ಸೇರಿಸಿರಬಹುದು ಎಂದುಕೊಂಡ...

'ದೊಡ್ಡಪ್ಪ, ದೊಡ್ಡಪ್ಪ....' ಎಂದು ಶಿವಲಿಂಗ ಕರೆಯುತ್ತ ಒಳಬಂದ. ಚಂದ್ರಕಾಂತಯ್ಯ ಪಡಸಾಲೆಯಲ್ಲಿ ಕುಂತಾತ ಕುಂತೇ ಇದ್ದ. ಉಂಬತ್ತು ಮೀರಿ ಹೋಗಿದ್ದರೂ ರೊಟ್ಟಿ ತಿನ್ನಲೂ ಮರೆತು ಕೂತಿದ್ದ.

'ಬಾರೋ ತಮ್ಮ ಏನ್ ಸಮಾಚಾರ?'

'ಅದೇ ದೊಡ್ಡಪ್ಪ, ಮಠಾಧೀಶರುಗಳ ಸಭೆಗೆ, ನಾಡಗೌಡರನ್ನು ಕರೆಯಾಕ ಬಂದಿದ್ದೆ. ನಿಮ್ಮ ಮನೆ ದಾಟಿಯೇ ಹೋಗಬೇಕಲ್ಲ, ಹಾಗೆ ಬಂದೆ. ಸಂಜೆ ಕಡೆ ಬರ್ರಿ ದೊಡ್ಡಪ್ಪ' ಎಂದು ಪುನಃ ಮರಳಿ ಹೋದ. ಚಂದ್ರಕಾಂತಯ್ಯ ರೊಟ್ಟಿ ತಿನ್ನಲು ಅಡುಗೆ ಮನೆಗೆ ಹೋದ.

## 3

ಬಿಳಿ ಅಂಗಿ, ಬಿಳಿ ಪಂಚೆ ತೊಟ್ಟುಕೊಂಡು, ಹೆಗಲ ಮ್ಯಾಲೊಂದು ಕಾವಿ ಸೆಲ್ಲೆ ಹಾಕಿಕೊಂಡು ಚಂದ್ರಕಾಂತಯ್ಯ ಸಿದ್ಧನಾದ. ಒಮ್ಮೊಮ್ಮೆ ಕಾವಿ ಸೆಲ್ಲೆ ತಲೆಗೆ ಸುತ್ತಿಕೊಂಡಿರುತ್ತಿದ್ದ. ಊರುಕೇರಿಯಲ್ಲಿ ಚಿರಪರಿಚಿತ. ಎತ್ತರವಾಗಿದ್ದ ಚಂದ್ರಕಾಂತಯ್ಯ ನೆಟ್ಟಗೆ ನಡೆಯುತ್ತಿದ್ದ ಈಗಲೂ, ವಯಸ್ಸು ಎಂಬತ್ತಕ್ಕೆ ಸಮೀಪಿಸಿದ್ದವು. ಶಾಂತಪ್ಪನ ಮನೆಗೆ ಬಂದ. ಗಂಡ ಹೆಂಡತಿ ಮನೆಯಲ್ಲಿದ್ದರು. 'ಬಾ ದೊಡ್ಡಪ್ಪ' ಎಂದು ಕರೆದು ಕೂಡಿಸಿದರು. ಚಂದ್ರಕಾಂತಯ್ಯ ಬಂದದ್ದಕ್ಕೋ ದಂಪತಿಗಳು ಉಮೇದಿ ಕಳಕೊಂಡರು.

'ಸುಜಾತಾ, ಮತ್ತೆ ಸಾಲಿ ಬಿಟ್ಟಳಂತ. ಅದೇ ಮಠದ ಬಾಲಕಿಯರ ವಸತಿ ಸಾಲೆಯಲ್ಲಿದ್ದು ಕಲಿಯುತ್ತಿದ್ದಳಲ್ಲ...?' ಚಂದ್ರಕಾಂತಯ್ಯ ಕೇಳಿದ.

ದಂಪತಿಗಳಿಬ್ಬರೂ ಮುಖಮುಖ ನೋಡಿಕೊಂಡು ಕುಗ್ಗಿದರು.

'ನಮ್ಮ ಹಣೆಬರಹ ಸರಿಯಿಲ್ಲ ದೊಡ್ಡಪ್ಪ. ಸರ್ಕಾರಿ ಶಾಲಿ ಹೆಡ್‌ಮಾಸ್ತ್ರ ಮಗ್ಗಿಗೆ ಲೈಂಗಿಕ ಕಿರುಕುಳ ನೀಡಿದ್ದ. ನಿನ್ನಿಂದ ಹೆದರಿ ತಣ್ಣಗಾಗಿದ್ದ...'

'ಅದಾಯಿತ್ತಲ್ಲ..?'

'ಏನೇಳದಪ್ಪ ದೊಡ್ಡಪ್ಪ, ನಮ್ಮ ಮಠದ್ದ ಅಂತ ವಸತಿ ಸಾಲಿಗೆ ಬಿಟ್ಟೆವು...'

'ಅದು ನನ್ಗ ಗೊತ್ತೈತೆ. ಅಲ್ಲಿ ಏನಾದ್ರೂ ನಡಿತೇನು?' ಎಂದು ಕೇಳಿದ್ದಕ್ಕೆ ದಂಪತಿಗಳು ಕಣ್ಣೀರು ಹಾಕುತ್ತ 'ಸಣ್ಣವರು ಮಗಳನ್ನ ವಸತಿ ಸಾಲಿಗೆ ಬಂದಾಗ ನೋಡಿದರಂತ. ಆಮ್ಯಾಲೆ ಮ್ಯಾಲಿಂದ ಮ್ಯಾಲೆ ಮಠದ ತಮ್ಮ ಖೋಲಿಗೆ ಕೆಲ್ಸದ ನಿಮಿತ್ತ ಬರಕ ಒತ್ತಾಯ ಮಾಡಿದ್ರಂತ. ಚಂದ್ರಮತಿ ನನ್ನ ಕರೆಸಿ, 'ಈ ಸಾಲ್ಯಾಗ ಮಗ್ಳು ಸುಜಾತಾಳನ್ನು ಬಿಡುಬ್ಯಾಡ್ರಿ. ಸಣ್ಣವರು ನೆಟ್ಟಗಿಲ್ಲ. ಸರ್ಕಾರಿ ಹೈಸ್ಕೂಲಿಗೆ ಸೇರಸ್ರಿ' ಎಂದು ಹೇಳಿದಳು. ಸುಜಾತಾ ಆಗಲೇ ಹೆದರಿದ್ದಳು. ಸದ್ಯ ಎಲ್ಲಿಯೂ ಬ್ಯಾಡಂತ ಮನ್ಯಾಗ ಇದ್ದಾಳ' ಎಂದು ಶಾಂತಪ್ಪ ಹೇಳಿದ್ದನ್ನು ಕೇಳಿ ಚಂದ್ರಕಾಂತಯ್ಯನ ಉಸಿರಾಟ ಬಿಸಿಯಾಯ್ತು. ಚಂದ್ರಮತಿ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿದರೂ 'ತನಗೆ ಧಕ್ಕೆಯಾಗ್ತದಂತ' ಹೇಳಿದಳೋ ಚಿಂತಿಸುತ್ತ?

'ಶಾಂತಪ್ಪ, ಈಗ ಮುಂದೇನು? ಮಗಳಿಂದ, ನೀವು ದಂಪತಿಗಳು ಹೆತ್ತವರಿಂದ ಕಂಪ್ಲೇಂಟು ಬರದು ಪೊಲೀಸ್ ಠಾಣೆಗೆ ಪತ್ರ ಕೊಡ್ರಿ. 'ರಕ್ಷಣೆ ಬೇಕು' ಅಂತ ತಿಳಸ್ರಿ. ನಾನೂ ಬರ್ತೀನಿ'.

'ನಮಗ್ಯಾಕಪ್ಪ...? ಅಂಥವರನ್ನ ಎದುರು ಹಾಕಿಕೊಂಡು ಬದುಕದೆಂಗ?' ಶಾಂತಪ್ಪ. 'ನೀವು ಸುಮ್ನಿದ್ರ ಮಗಳನ್ನ ಬಲಿ ಕೊಟ್ಟಂಗಲ್ಲೇನು?'

'ಹೆಣ್ಣುಮಗ್ಳು. ಮದುವೆ ಮಾಡಿ ಬಿಡ್ತೀವಿ' ಹೆಂಡತಿ ಅಂದಳು, ಕಣ್ಣೀರು ಹಾಕುತ್ತ.

'ನನ್ಗ ಮದುವೆ ಬ್ಯಾಡ! ಸರ್ಕಾರಿ ಹೈಸ್ಕೂಲ್‌ಗೆ ಹೋಗ್ತೀನಿ' ತನ್ನ ಕೋಣೆಯಿಂದ ಧುತ್ತನೆ ಬಂದ ಸುಜಾತಾ ಚೀರಿದಳು. ಚಂದ್ರಕಾಂತಯ್ಯ ಮಿಟ್ಟ ಬಿದ್ದಂತೆ ಕಂಪಿಸಿದ. ಸುಜಾತಾ ಬೆಳೆದಿದ್ದಳು. ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ! 'ಶಾಂತಪ್ಪ, ಮಗ್ಳಿಗೆ ಮದುವೆ ವಯಸ್ಸಾಗಿಲ್ಲ. ನೀವೇನಾದರೂ ಮೂರ್ಖತನದಿಂದ ಮದುವೆಗೆ ಯೋಚಿಸಿದ್ರೆ ಇದು ಬಾಲ್ಯವಿವಾಹ ಆಗ್ತದ. ಕಾನೂನಿನ ಪ್ರಕಾರ ನೀವೇ ಮೊದ್ಲು ಜೈಲಿಗೆ ಹೊಗ್ತೀರಿ. ಅಂಥ ತಪ್ಪ ಮಾಡಬ್ಯಾಡ್ರೀ'